# ಮಣ್ಣಿನ ಗುಣ; ಮಾರ್ಥಾ 'ಫುಲ್‌ಖುಷ್'!



ನ್ಯೂಯಾರ್ಕ್‌ನಿಂದ ಬಂದ ಲ್ಯೂಕಸ್ ಬಿಯಾಂಚಿ ಪತ್ನಿ ಮಾರ್ಥಾ ಲಿನ್ ಜತೆಗೆ

ಮನೆಯ ಟೆರೇಸ್‌ನಲ್ಲಿ ಹಣ್ಣು ತರಕಾರಿ ಬೆಳೆಸುವುದು ಕೆಲವರ ಹವ್ಯಾಸ. ನಾವೇ ಬೆಳೆದ ಹಣ್ಣು ತರಕಾರಿಗಳ ರುಚಿಯೂ ಹೆಚ್ಚು. ಗಿಡ, ಬಳ್ಳಿಗಳಲ್ಲಿ ಹೂವು, ಕಾಯಿ, ಹಣ್ಣು ಬೆಳೆಯುವುದನ್ನು ನೋಡುವುದೇ ಮನಸ್ಸಿಗೆ ಖುಷಿ. ಇದೀಗ ವಿದೇಶೀಯರೂ ಬೆಂಗಳೂರಿನಲ್ಲಿ ಬಂದು ನೆಲೆಸಿ ಮನೆಯ ಮಹಡಿಯ ಮೇಲೆ ತರಕಾರಿ ಬೆಳೆದು ಫುಲ್‌ಖುಷ್ ಆಗಿದ್ದಾರೆ. ಜತೆಗೆ ಈ ಗಿಡಗಳಲ್ಲಿ ಬಹುಬೇಗ ಇಳುವರಿ ಬಂದದ್ದನ್ನು ನೋಡಿ ಇಲ್ಲಿನ 'ಮಣ್ಣಿನ ಗುಣ'ವನ್ನೂ ಗುಣಗಾನ ಮಾಡಿದ್ದಾರೆ.

ಲ್ಯೂಕಸ್ ಬಿಯಾಂಚಿ ತಮ್ಮ ಪತ್ನಿ ಮಾರ್ಥಾ ಲಿನ್ ಜತೆಗೆ ನ್ಯೂಯಾರ್ಕ್‌ನಿಂದ ಬೆಂಗಳೂರಿಗೆ ಬಂದವರು.

ಮಾರ್ಥಾ ಹಣ್ಣು ತರಕಾರಿ ಬೆಳೆಯಲಾರಂಭಿಸಿದ ಹಿನ್ನೆಲೆಯೂ ರೋಚಕವೇ. ಆರಂಭದಲ್ಲಿ ಇಲ್ಲಿ ಸಮಯ ನಿರ್ವಹಣೆಗಾಗಿ ಗಿಡಗಳನ್ನು ನೆಟ್ಟರು. ಇದರಿಂದ ಬರುವ ಇಳುವರಿ ಕಂಡು ಉತ್ತೇಜಿತರಾದ ಮಾರ್ಥಾ, ತಮ್ಮ ಟೆರೇಸ್ ಗಾರ್ಡನ್‌ನಲ್ಲಿ ದೊಡ್ಡ ಕೈತೋಟವನ್ನೇ ಮಾಡಿದ್ದಾರೆ. ಹಲವು ವಿಧದ ಬೀಜಗಳನ್ನು ಸಂಗ್ರಹಿಸಿ ಹಣ್ಣು ತರಕಾರಿ ಮನೆಯ ಖರ್ಚಿಗೆ ಬೇಕಾದಷ್ಟು ಬೆಳೆಯುತ್ತಿದ್ದಾರೆ. ಇವೆಲ್ಲವೂ ಚೆನ್ನಾಗಿ ಫಸಲನ್ನೂ ಕೊಡುತ್ತಿರುವುದರಿಂದ 'ಇಲ್ಲಿನ ಮಣ್ಣಿನ ಗುಣ ಚೆನ್ನಾಗಿದೆ. ಫಲವತ್ತಾದ ಮಣ್ಣಿನಿಂದಾಗಿಯೇ ಗಿಡಗಳೂ ಚೆನ್ನಾಗಿ ಬೆಳೆಯುತ್ತಿದೆ. ಈ ಹವ್ಯಾಸವನ್ನು ಮುಂದುವರಿಸುವುದಾಗಿ ಹೇಳುತ್ತಾರೆ ಮಾರ್ಥಾ.

ಲ್ಯೂಕಸ್ ಉದ್ಯಮ ಆರಂಭಿಸಲೆಂದು ಇಲ್ಲಿಗೆ ಬಂದಾಗ ಅವರು ಕನಸಿನಲ್ಲೂ ಬೆಂಗಳೂರೇ ಅವರ 'ಹೋಮ್ ಟೌನ್' ಆಗುತ್ತದೆ ಎಂದು ಅಂದುಕೊಂಡಿರಲೇ ಇಲ್ಲವಂತೆ. ಕಳೆದ ಮೂರು ವರ್ಷಗಳಿಂದ ಬೆಂಗಳೂರಿನಲ್ಲಿರುವ ಲ್ಯೂಕಸ್ ಬಂದು ಒಂದು ವರ್ಷದ ಬಳಿಕ ತಮ್ಮ ಪತ್ನಿ ಮಾರ್ಥಾ ಲಿನ್ ಅವರನ್ನು ಕರೆತಂದಿದ್ದಾರೆ.

ಲ್ಯೂಕಸ್ ಇಟಲಿಯಲ್ಲಿ ಹುಟ್ಟಿದ್ದು, ಕ್ಯಾಲಿಫೋರ್ನಿಯದಲ್ಲಿ ಬೆಳೆದದ್ದು, ಹೆಚ್ಚಿನ ಓದಿಗಾಗಿ ನ್ಯೂಯಾರ್ಕ್‌ಗೆ ಹೋಗಿ 15 ವರ್ಷ ಅಲ್ಲೇ ಇದ್ದವರು. ಅಲ್ಲಿನ ಬ್ಯಾಂಕ್ ಒಂದರಲ್ಲಿ ಕೆಲ ವರ್ಷ ಕೆಲಸ ಮಾಡಿದರು. ಅಲ್ಲಿಂದ ಬೇರೆ ಕಂಪೆನಿಗೆ ಸೇರಿ ಸಂಶೋಧನೆ ಕೈಗೊಳ್ಳಲೆಂದು ಬೆಂಗಳೂರಿಗೆ ಬಂದವರು.

ಮಾರ್ಥಾ ಲಿನ್ ಥೈವಾನ್‌ನವರು. ಮಾರ್ಥಾ ಬಯೋಕೆಮಿಸ್ಟ್ರಿಯಲ್ಲಿ ಸ್ನಾತಕೋತ್ತರ ಪದವಿ ಓದಲೆಂದು ನ್ಯೂಯಾರ್ಕ್‌ಗೆ ಹೋಗಿದ್ದರು. ಅಲ್ಲಿ ಲ್ಯೂಕಸ್ ಪರಿಚಯವಾಗಿತ್ತು. ಕಳೆದ 13 ವರ್ಷಗಳಿಂದ ಮಾರ್ಥಾ ಲ್ಯೂಕಸ್ ಜತೆಗೆ ಸ್ನೇಹಿತರಾಗಿದ್ದರು. ಒಂದೇ ಕಂಪೆನಿಯಲ್ಲಿ ವೃತ್ತಿಯನ್ನೂ ಆರಂಭಿಸಿದರು. ಅದಾಗಿ ಸಹಬಾಳ್ವೆ ನಡೆಸಿ ಬಾಳಸಂಗಾತಿಗಳಾದರು.

ಅಮೆರಿಕದಲ್ಲಿರುವಾಗ ಕೆಲಸದ ನಿಮಿತ್ತ ಲ್ಯೂಕಸ್ ಅನೇಕ ಬಾರಿ ಗುರಗಾಂವ್, ಜೈಪುರ, ಗೋವಾ, ರಾಜಸ್ತಾನ ಮುಂತಾದ ಕಡೆಗೆ ಬಂದು ಹೋಗಿದ್ದಾರೆ. ಆದರೂ ಅವರಿಗೆ ಇಲ್ಲಿನ ವಿಭಿನ್ನ ಸಂಸ್ಕೃತಿಯ ಪರಿಚಯ ಅಷ್ಟಾಗಿ ಆಗಿರಲಿಲ್ಲ. ಆದರೆ ಬೆಂಗಳೂರಿಗೆ ಬಂದು ಇಲ್ಲಿಯೇ ಇರಬೇಕಾದ ಪ್ರಮೇಯ ಬಂದಾಗ ಅವರಿಗೆ ಸಂಸ್ಕೃತಿ, ಆಚರಣೆ, ಆಹಾರ ಮುಂತಾದ ಸಮಸ್ಯೆ ಕಾಡಲಾರಂಭಿಸಿತಂತೆ. ಆರಂಭದಲ್ಲಿ ಇಲ್ಲಿಗೆ ಹೊಂದಿಕೊಳ್ಳಲು ಬಹಳ ಕಷ್ಟಪಟ್ಟರಂತೆ. ವಾರಾಂತ್ಯದ ಬಿಡುವಿನಲ್ಲೂ ಒಂದು ನಿರ್ದಿಷ್ಟ ಯೋಜನೆಯನ್ನೂ ಹಾಕಿಕೊಳ್ಳದೆ ಭಾನುವಾರಗಳಂದೂ ಇಲ್ಲಿ ಹೇಗೆ ಇರುವುದೆಂಬ ಸಮಸ್ಯೆ ಕಾಡಿತ್ತಂತೆ. ಅಮೆರಿಕದ ಜೀವನಶೈಲಿಗೆ ಚೆನ್ನಾಗಿ ಒಗ್ಗಿಹೋಗಿದ್ದ ಇಬ್ಬರಿಗೂ ಇಲ್ಲಿಯ ಜೀವನಶೈಲಿ ಹಿಡಿಸಲೇ ಇಲ್ಲವಂತೆ.

## ಆಹಾ ರುಚಿ..!

ಇಲ್ಲಿನ ರೆಸ್ಟೋರೆಂಟ್‌ಗಳೂ ಚೆನ್ನಾಗಿವೆ. 'ಕ್ಯಾಲಿಫೋರ್ನಿಯಾ ಬರಿಟ್ಟೊ', 'ಮಧುರೆ ಇಡ್ಲಿ ಶಾಪ್'.. ಇವುಗಳನ್ನು ಬಹಳವಾಗಿ ಪ್ರೀತಿಸುವ ಇವರು, ಇಲ್ಲಿನ ಊಟ ತಿಂಡಿಗಳನ್ನು ಒಂದೊಂದಾಗಿ ಸವಿದು ರುಚಿ ಹತ್ತಿಸಿಕೊಂಡಿದ್ದಾರೆ.

'ನಗರದೊಳಗೆ ಸುತ್ತಾಡಲು ಇಲ್ಲಿನ ಸಂಚಾರ ವ್ಯವಸ್ಥೆ ಬಹಳ ಉಪಯುಕ್ತವಾಗಿದೆ ಎನ್ನುವ ಲ್ಯೂಕಸ್, ಓಲಾ, ಉಬೆರ್ ಕ್ಯಾಬ್‌ಗಳಿರುವ ಕಾರಣ ಇಲ್ಲಿ ಸ್ವಂತ ಕಾರಿನ ಅವಶ್ಯಕತೆಯೇ ಇಲ್ಲ. ಜತೆಗೆ ಮೆಟ್ರೊ ರೈಲಿನ ವ್ಯವಸ್ಥೆ ಕೂಡ ಸುರಕ್ಷಿತ ಪ್ರಯಾಣಕ್ಕೆ ಬಹಳ ಅನುಕೂಲಕರವಾಗಿದೆ. ಇಡೀ ಬೆಂಗಳೂರಿಗೆ ಮೆಟ್ರೊ ಕನೆಕ್ಟ್ ಆದರೆ ಇಲ್ಲಿನ ಟ್ರಾಫಿಕ್ ಸಮಸ್ಯೆ ಬಗೆಹರಿದಂತೆ' ಎಂದು ಅಭಿಪ್ರಾಯಪಡುತ್ತಾರೆ.

ಎಲ್ಲ ವಿದೇಶೀಯರಿಗೆ ಆದ ಆಗುವ ಅನುಭವಗಳಂತೆ ಇವರೂ ಇಲ್ಲಿನ ಜನರ ಸ್ನೇಹಶೀಲ ಮನೋಭಾವವನ್ನು ಮನಸಾರೆ ಕೊಂಡಾಡುತ್ತಾರೆ. 'ಇಲ್ಲಿನ ಜನ ಸಹನಾಶೀಲರು, ಪರೋಪಕಾರಿಗಳು, ಉತ್ತಮ ಸಂವಹನಾಕಾರರು' ಎಂದು ವಿಶ್ಲೇಷಿಸುತ್ತಾರೆ ಈ ದಂಪತಿ.

■ **ಅವನೀಶ್**